**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

ಸಾಕ್ಷಿದಾರನ ಹೆಸರುಃ- ಸೀತಾರಾಮಯ್ಯ
ತಂದೆ ಹೆಸರು ಃ- ಲೇಟ್ ಚಿಕ್ಕಣ್ಣ
ವಯಸ್ಸು ಃ- 55 ವರ್ಷ
ಉದ್ಯೋಗ ಃ- ವ್ಯವಸಾಯ
ವಾಸ ಃ- ಶ್ಯಾನುಬೋಗನಹಳ್ಳಿ

**ಸಾಕ್ಷಿಗೆ ದಿಃ 05.12.2022 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಸಾಕ್ಷಿಯು ನಿ.ಪಿ.2 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2 ಬಿ ಎಂದು ಗುರುತಿಸಲಾಯಿತು. ಈಗ್ಗೆ 2 ವರ್ಷಗಳ ಹಿಂದೆ ಸುನೀತಾ ಎಂಬುವವರು ಆರೋಪಿತರ ಜಮೀನಿನ ಬಳಿ ಚಾಸಾ.1 ರವರಿಗೆ ಹೊಡೆಯುತ್ತಿದ್ದರು. ಆನಂತರ ಘಟನಾಸ್ಥಳಕ್ಕೆ ಬಂದು ಪಂಚನಾಮೆ ಮಾಡಿರುತ್ತಾರೆ. ಅದನ್ನು ಓದಿ ನನಗೆ ತಿಳಿಸಿರುತ್ತಾರೆ. ಪೋಲೀಸರು ಯಾವ ಸಮಯದಲ್ಲಿ ಸ್ಥಳಕ್ಕೆ ಬಂದಿದ್ದರು ಎಂದು ನಿಖರವಾಗಿ ಗೊತ್ತಿಲ್ಲ. ಆ ಸಮಯದಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಪೋಲೀಸರು ಸ್ಥಳವನ್ನು ಪರಿಶೀಲಿಸಿ ನನ್ನ ಸಹಿ ಪಡೆದಿರುತ್ತಾರೆ ಅದರ ಹೊರತಾಗಿ ಬೇರೇನು ಮಾಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ದಿಃ 19.09.2019 ರಂದು ಸಂಜೆ 5.00 ರಿಂದ 6.00 ಗಂಟೆಯ ಸಮಯದಲ್ಲಿ ಘಟನಾಸ್ಥಳದಲ್ಲಿ ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿ ನ್ಯಾಯಾಲಯದ ಮುಂದಿರುವ ಮು.ಮಾವನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪೋಲೀಸರು ಪಂಚನಾಮೆ ಮಾಡಲು ಬಂದಾಗ ಚಾಸಾ.1 ಮತ್ತು 4 ರವರು ಸ್ಥಳದಲ್ಲಿ ಹಾಜರಿದ್ದರು ಎಂದರೆ ಸರಿ. ನನ್ನ ಸಮಕ್ಷಮ ಮುಮವನ್ನು ವಶಪಡಿಸಿಕೊಂಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಟಿ ವಿ ಕೆ ರವರಿಂದ**

ಆರೋಪಿತರು ಮತ್ತು ಚಾಸಾ.1 ಮತ್ತು 2 ನಮ್ಮ ಊರಿನವರು ಎಂದರೆ ಸರಿ. ಪೋಲೀಸರು ಸ್ಥಳಕ್ಕೆ ಬಂದ ದಿನಾಂಕ ನೆನಪಿಲ್ಲ. ಆದರೆ ಸಂಜೆ ಸುಮಾರು 4.00 ಗಂಟೆಗೆ ಬಂದಿರುತ್ತಾರೆ. ಪೋಲೀಸರು ನನಗೆ ನೋಟೀಸ್ ನೀಡಿರುವುದಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ನಿಪಿ.2 ರಲ್ಲಿನ ಮಾಹಿತಿಗಳು ನನಗೆ ಗೊತ್ತಿಲ್ಲ. ಪೋಲೀಸರು ಸ್ಥಳಕ್ಕೆ ಬಂದಿರುವುದಿಲ್ಲ ಮತ್ತು ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)
ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಕುಣಿಗಲ್.